# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.03/2026

Pw-04

Cw-05

ಸಾಕ್ಷಿದಾರರ ಹೆಸರುಃ ಶ್ರೀ ಸಿದ್ದನಗೌಡ ಗೌಡರ

ತಂದೆಃಗಂಡನ ಹೆಸರುಃ ಶ್ರೀ ಶೇಖರ ಗೌಡರ

ವಯಸ್ಸುಃ 42 ವರ್ಷ

ಉದ್ಯೋಗಃ ಪ್ರ.ದ.ಸ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಹಾವೇರಿ

ವಾಸ ಸ್ಥಳಃ ಹಾವೇರಿ

**ದಿನಾಂಕ:06.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಕಳೆದ 5½ ವರ್ಷಗಳಿಂದ ಹಾವೇರಿಯ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಪ್ರ.ದ.ಸ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ31.12.2025 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನಾನು ನಮ್ಮ ಕಚೇರಿಯಲ್ಲಿ ಕರ್ತವ್ಯದಲ್ಲಿದ್ದಾಗ ನಮ್ಮ ಮೇಲಾಧಿಕಾರಿಯವರು DCRE ಪೊಲೀಸ್ ಠಾಣೆಗೆ ಹೋಗಿ ಪಂಚನಾಮೆಗೆ ಸಹಕರಿಸಿ ಎಂದು ಮೌಖಿಕವಾಗಿ ಹೇಳಿದರು. ಆಗ ನಾನು ಮತ್ತು ನಮ್ಮ ಕಚೇರಿಯ ದ್ವಿ.ದ.ಸ ಆದ ಚಾಸಾ-4 ರವರು ಸೇರಿಕೊಂಡು ಹಾವೇರಿಯ DCRE ಪೊಲೀಸ್ ಠಾಣೆಗೆ ಹೋದೆವು. ಆಗ ಸಮಯ ಸಂಜೆ 5.00 ಗಂಟೆಯಾಗಿತ್ತು.

2. ಆಗ DCRE ಪೊಲೀಸ್ ಠಾಣೆಯಲ್ಲಿ ಚಾಸಾ-8 ರವರು ತನ್ನ ಜಿಯೋ ಕಂಪನಿಯ ಸಿಮ್ ಇರುವ ಮೊಬೈಲ್ ನ್ನು ನಮ್ಮ ಸಮಕ್ಷಮ ತನಿಖಾಧಿಕಾರಿ ಮುಂದೆ ಹಾಜರುಪಡಿಸಿದರು. ಆಗ ತನಿಖಾಧಿಕಾರಿಯು ಸದರಿ ಮೊಬೈಲ್ ನ್ನು ಪರಿಶೀಲಿಸಿ ಅದರಲ್ಲಿರುವ ಸಿಮ್ ನ್ನು ನಮಗೆ ತೋರಿಸಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳಿಸಬೇಕಾಗಿದೆ ಎಂದು ಹೇಳಿ ಅದನ್ನು ಜಪ್ತು ಪಂಚನಾಮೆ ಮಾಡಿ ವಶಪಡಿಸಿಕೊಂಡು, ಫೋಟೋಗಳನ್ನು ತೆಗೆದಿರುತ್ತಾರೆ.

3. ಸದರಿ ಮೊಬೈಲ್ ಜಪ್ತು ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–5 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ–5(ಬಿ) ಎಂದು ಗುರುತಿಸಲಾಯಿತು. ಪೋಲೀಸರು ತೆಗೆದ 2 ಪೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ–6 ಮತ್ತು 7 ಎಂದು ಗುರುತಿಸಲಾಗಿದೆ. ಪೊಲೀಸರು ವಶಪಡಿಸಿಕೊಂಡಂತಹ ಮೊಬೈಲ್ ನ್ನು ಪುನಃ ನೋಡಿದರೆ ಗುರುತಿಸಬಲ್ಲೆ.

ಈ ಹಂತದಲ್ಲಿ ತನಿಖಾಧಿಕಾರಿಯು ಮೊಬೈಲ್ ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸದೇ ಇರುವ ಕಾರಣ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.

**ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎಂ.ಸಿ.ಹೆಚ್ ವಕೀಲರಿಂದಃ**

4. ಪೊಲೀಸರು ನನಗೆ ನೀಡಿದ ಪೊಲೀಸ್ ನೋಟೀಸುಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನಗೆ ಬೆಳಿಗ್ಗೆ 9.30 ಗಂಟೆಗೆ ನೋಟೀಸುಗಳನ್ನು ಕೊಟ್ಟರು. ಆಗ ನಾನು ಗ್ರಾಮ ಪಂಚಾಯತಿಯಲ್ಲಿದ್ದೆನು. ನನಗೆ ಪೊಲೀಸ್ ನೋಟೀಸನ್ನು ಕೊಟ್ಟಂತಹ ಪೊಲೀಸರ ಹುದ್ದೆಯ ಹೆಸರನ್ನು ನನಗೆ ಹೇಳಲಾಗುವುದಿಲ್ಲ. ಪಂಚನಾಮೆಗಳಲ್ಲಿ ಏನೇನು ಬರೆಯಲಾಗಿದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ಪಂಚನಾಮೆಗಳನ್ನು ನಾನು ಓದಿ ನೋಡಿಲ್ಲ.

7. ಘಟನಾ ಸ್ಥಳದ ಚಕ್ಕುಬಂಧಿಯನ್ನು ನನಗೆ ಹೇಳಲಾಗುವುದಿಲ್ಲ. ಮೋಟಾರ್ ಸೈಕಲ್ ಜಪ್ತು ಮಾಡಿದ ಸ್ಥಳದ ಚಕ್ಕುಬಂಧಿ ನನಗೆ ಹೇಳಲಾಗುವುದಿಲ್ಲ. ಸಾಮಾನ್ಯವಾಗಿ ಕಚೇರಿಯ ಅವಧಿಯಲ್ಲಿ ನಾನು ಅನ್ಯ ಕರ್ತವ್ಯಕ್ಕಾಗಿ ಹೊರಗಡೆ ಹೋಗುವ ಪ್ರಸಂಗ ಬಂದಾಗ ನಾನು ನಮ್ಮ ಕಚೇರಿಯನ್ನು ಬಿಡುವ ಕಾಲಕ್ಕೆ ಕಚೇರಿಯ ಚಲನ-ವಲನ ವಹಿಯಲ್ಲಿ ನಮೂದು ಮಾಡಬೇಕಾಗುತ್ತದೆ ಎಂದರೆ ನಿಜ. ಈ ಪ್ರಕರಣದಲ್ಲಿ ಸ್ಥಳ ಪಂಚನಾಮೆಗೆ ಹೋಗುವ ಕಾರಣವನ್ನು ಮತ್ತು ಸಮಯವನ್ನು ಸದರಿ ಚಲನ-ವಲನ ವಹಿಯಲ್ಲಿ ನಮೂದು ಮಾಡಿ ಹೋಗಿರುವುದಿಲ್ಲ. ಆ ರೀತಿ ನಮೂದು ಮಾಡಿ ಹೋಗಲು ನನಗೆ ತೊಂದರೆ ಇರಲಿಲ್ಲ.

8. ನಾನು ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೊಲೀಸರು ಜಪ್ತು ಮಾಡಿಕೊಂಡಂತಹ ಮೋಟಾರ್ ಸೈಕಲ್ ನ ನೋಂದಣಿ ಸಂಖ್ಯೆಯನ್ನು ನನಗೆ ಹೇಳಲಾಗುವುದಿಲ್ಲ. ಸದರಿ ಮೋಟಾರ್ ಸೈಕಲ್ ನ ಚಸ್ಸಿ ನಂಬರ್ ಮತ್ತು ಇಂಜಿನ್ ನಂಬರ್ ನ್ನು ನನಗೆ ಹೇಳಲಾಗುವುದಿಲ್ಲ. ಸದರಿ ಮೋಟಾರ್ ಸೈಕಲ್ ಮಾಲೀಕರು ಯಾರು ಎಂದು ನನಗೆ ಹೇಳಲಾಗುವುದಿಲ್ಲ. ಪಂಚನಾಮೆಗಳನ್ನು ಪೊಲೀಸ್ ಠಾಣೆಯಲ್ಲಿಯೇ ಬರೆಯಲಾಗಿದೆ. ಪಂಚನಾಮೆಗಳನ್ನು ಬರೆಯಲು ಯಾರು ಮಾಹಿತಿ ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ.

9. ನನ್ನ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಪಂಚನಾಮೆಗಳ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ನಿಜ. ಆರೋಪಿಗೂ ಪಂಚನಾಮೆಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ನಿಜ. ಪೊಲೀಸರ ಕೋರಿಕೆಯ ಮೇರೆಗೆ ಪಂಚನಾಮೆಗೆ ಸಹಿ ಮಾಡಿ ಅವರ ಕೋರಿಕೆಯ ಮೇರೆಗೆ ಪೋಟೋಗಳಿಗೆ ನಿಂತಿದ್ದೇನೆ ಎಂದರೆ ನಿಜ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.